ದಿನಾಂಕಃ 21-02-2023
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ವಾದಿ ಪರ Sri P.D.T ವಕೀಲರಿಂದಃ**

ನಾನು ಈ ದಾವೆಯಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದು , ಸದರಿ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿ . ಸದರಿ ವಜಾ ಆದೇಶದ ವಿರುದ್ಧ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

ದಾವಾ ಸ್ವತ್ತು ನನ್ನ ತಂದೆಗೆ ಸರ್ಕಾರದಿಂದ ಮಂಜುರಾದಂತಹ ನಿವೇಶನವಾಗಿರುತ್ತದೆ ಎಂದರೆ ಸರಿ. ನಾನು ನನ್ನ ತಂದೆ ಒಟ್ಟಿಗೇ ವಾಸವಾಗಿರುತ್ತೇವೆ ಎಂದರೆ ಸರಿ . ನನ್ನ ತಂದೆ ಸುಸಂಸ್ಕೃತರಾಗಿದ್ದು , ನನ್ನ ಎಲ್ಲಾ ಯೋಗಕ್ಷೇಮವನ್ನು ನೋಡಿಕೊಂಡು ಬಂದಿರುತ್ತಾರೆ ಎಂದರೆ ಸರಿ . ನನ್ನ ತಂದೆ ದಾವಾ ಸ್ವತ್ತನ್ನು ವಾದಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಸಾಕ್ಷಿಗೆ ನಿ.ಪಿ.1 ರ ಕ್ರಯಪತ್ರವನ್ನು ತೋರಿಸಲಾಗಿ , ಸದರಿ ಕ್ರಯಪತ್ರದಲ್ಲಿರುವ ಛಾಯಾಚಿತ್ರ ತನ್ನ ತಂದೆಯದ್ದಾಗಿರುತ್ತದೆಂದು ಹೇಳಿದ್ದು , ಅದರೆ ಸದರಿ ಕ್ರಯಪತ್ರದಲ್ಲಿರುವ ಸಹಿಗಳನ್ನು ತನ್ನ ತಂದೆಯ ಸಹಿಗಳಲ್ಲವೆಂದು ನುಡಿದಿರುತ್ತಾರೆ.

ನಿ.ಪಿ.2 ರ ಹಕ್ಕು ಪತ್ರವನ್ನು ನನ್ನ ತಂದೆಗೆ ಸರ್ಕಾರದವರು ನೀಡಿರುತ್ತಾರೆ ಎಂದರೆ ಸರಿ . ನನ್ನ ತಂದೆ ದಾವಾ ನಿವೇಶನವನ್ನು ತಾಃ 14-3-2011 ರಂದು ವಾದಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿ ಸ್ವಾಧೀನವನ್ನೂ ಸಹ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಸರ್ಕಾದವರು ನೀಡಿದ ಹಕ್ಕು ಪತ್ರ ನಮ್ಮ ಬಳಿ ಇರುವುದಿಲ್ಲ ನನ್ನ ತಂದೆ ಸದರಿ ಹಕ್ಕು ಪತ್ರವನ್ನು ಕ್ರಯಪತ್ರವನ್ನು ಬರೆದುಕೊಡುವ ಸಮಯದಲ್ಲಿ ವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು

ಮುಂದುವರಿದು, ಹಕ್ಕು ಪತ್ರವನ್ನು ನನ್ನ ತಂದೆ ಗುಡಿಸಲಿಗೆ ಬೆಂಕಿ ಬೀಳಬಹುದೆಂಬ ಭಯದಿಂದ ವಾದಿಯ ಮನೆಯಲ್ಲಿಟ್ಟಿದ್ದು , ವಾದಿಯು ಅದನ್ನು ಬಳಸಿಕೊಂಡು ಫೋರ್ಜರಿ ಮಾಡಿರುತ್ತಾರೆಂದು ನುಡಿದಿರುತ್ತಾರೆ. ವಾದಿ ಹಕ್ಕು ಪತ್ರವನ್ನು ಬಳಸಿ ಫೋರ್ಜರಿ ಮಾಡಿರುತ್ತಾರೆಂದು ಯಾವುದೇ ಕ್ರಿಮಿನಲ್ ಪ್ರಕರಣವನ್ನು ನಾನಾಗಲೀ, ನನ್ನ ತಂದೆಯಾಗಲೀ ದಾಖಲು ಮಾಡಿರುವುದಿಲ್ಲ. ವಾದಿ ಕ್ರಯಪತ್ರದ ರೀತ್ಯಾ ಖಾತೆ ಬದಲಾವಣೆಗೆ ಸೀಬಿ ಗ್ರಾಮ ಪಂಚಾಯತಿಗೆ ಅರ್ಜಿ ನೀಡಿದ ಸಮಯದಲ್ಲಿ ನಾವು ಖಾತೆ ಬದಲಾವಣೆಯನ್ನು ಪ್ರಶ್ನಿಸಿ ತಕರಾರು ಅರ್ಜಿ ನೀಡಿದ್ದೆವು ಎಂದರೆ ಸರಿ .

ನಾವು ದಾವಾ ನಿವೇಶನದಲ್ಲಿ ಗುಡಿಸಲು ಹಾಕಿಕೊಂಡು ವಾಸ ಮಾಡುತ್ತಿದ್ದೇವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಬೇರೆ ಕಡೆ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ–</u> ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಶಿರಾ.